**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ**

**ಸಿ.ಸಿ.ನಂಃ 286/2022**

ಪಿರ್ಯಾದುದಾರರು : ರಾಜ್ಯದ ಪರವಾಗಿಃ ಪೊಲೀಸ್ ನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಸುರೇಶ್ ಹಳೇರಿತ್ತಿ, (ಎ.ಹೆಚ್.ಸಿ.2531) 27 ವರ್ಷ,
ತಂದೆಃ ಗಿರಿಯಪ್ಪ ,
ವಾಸಃ ಸಶಸ್ತ್ರ ಮೀಸಲು ಪಡೆ,
ಮಂಗಳೂರು ನಗರ, ಮಂಗಳೂರು.

ನಾನು, ಮಾಲಾ ಸಿ., ಬಿ.ಎ., ಎಲ್.ಎಲ್.ಎಂ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ನಿಮ್ಮನ್ನುಃ

ಈ ಕೆಳಕಂಡಂತೆ ಆಪಾದನೆಗೆ ಗುರಿಪಡಿಸಿರುತ್ತೇನೆ.

ಆರೋಪಿಯಾದ ನೀವು, ದಿನಾಂಕಃ 27-12-2021 ರಂದು ಬೆಳಿಗ್ಗೆ 09-45 ಗಂಟೆಯ ಸಮಯಕ್ಕೆ ಮೂಡಬಿದ್ರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮೂಡಬಿದ್ರೆ ತಾಲ್ಲೂಕು ಪುತ್ತಿಗೆ ಗ್ರಾಮದ ವಿದ್ಯಾಗಿರಿ ಎಂಬಲ್ಲಿ ಹಾದುಹೋಗುವ ಮಂಗಳೂರು-ಮೂಡಬಿದ್ರೆ ರಾ.ಹೆ.169 ರ ಸಾರ್ವಜನಿಕ ರಸ್ತೆಯಲ್ಲಿ ನೀವು ಪೊಲೀಸ್ ಇಲಾಖಾ ವಾಹನ ಕೆಎ-19-ಜಿ-0703 ರ ಚಾಲಕರಾಗಿದ್ದು ಸದ್ರಿ ವಾಹನವನ್ನು ಮಂಗಳೂರು ಕಡೆಯಿಂದ ಮೂಡಬಿದ್ರೆ ಕಡೆಗೆ ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗಿ ಚಲಾಯಿಸಿಕೊಂಡು ಬಂದು ಸಾಕ್ಷಿ-1 ನೇ ಚಿಕ್ಕಪ್ಪನಾದ ಬಾವು ಬ್ಯಾರಿಯವರು ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-19-ಹೆಚ್ ಸಿ-3254 ನಂಬ್ರದ ಸ್ಕೂಟರ್ ಗೆ ಡಿಕ್ಕಿ ಹೊಡೆದ ಪರಿಣಾಮ ಬಾವು ಬ್ಯಾರಿರವರು ಸ್ಕೂಟರ್ ಸಮೇತಾ ರಸ್ತೆಗೆ ಬಿದ್ದು ಅವರ ತಲೆಗೆ, ಮುಖಕ್ಕೆ, ಗಲ್ಲಕ್ಕೆ, ಬಲಕಾಲಿಗೆ ತೀವ್ರ ಸ್ವರೂಪದ ಗಾಯವಾಗಿದ್ದು ಚಿಕಿತ್ಸೆಗೆಂದು ಎ.ಜೆ. ಆಸ್ಪತ್ರೆಗೆ ಕರೆದುಕೊಂಡು ನಂತರ ಹೆಚ್ಚಿನ ಚಿಕಿತ್ಸೆಗೆಂದು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಿಸಿದ್ದು ದಿಃ19-01-2022 ರವರೆಗೆ ಸದ್ರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ವೈದ್ಯರ ಸಲಹೆಯಂತೆ ನಂತರ ಮನೆಯಲ್ಲಿಯೇ ಚಿಕಿತ್ಸೆ ಮುಂದುವರಿಸಿದ್ದು, ಕೋಮ ಸ್ಥಿತಿಯಲ್ಲಿದ್ದ ಬಾವು ಬ್ಯಾರಿರವರು ದಿಃ24-04-2022 ರಂದು ಮೃತಪಟ್ಟಿರುತ್ತಾರೆ. ಆದ್ದರಿಂದ

ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ **279** ಮತ್ತು **304**(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಪ್ರಶ್ನೆ 1. ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2. ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುತ್ತೀರಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಅಥರ್ವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಅವರು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲಿಸಿರುತ್ತೇನೆ)

ಸಹಿ/-

ದಿನಾಂಕಃ **06-10-2022**

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ